UASB LIBRARY
Jai Kisan
Agri Newspaper Clippings
Saturday 23-12-2023
Pg. 1

ಕನಿಷ್ಠ ನೂರು ರೈತರ ಮಕ್ಕಳಿಗೆ ಅವಕಾಶ । ₹100 ಕೋಟಿ ವೆಚ್ಚ?
ಕೃಷಿಕರನ್ನು ಸ್ವಾವಲಂಬಿಯಾಗಿಸಲು ಸರ್ಕಾರದ ಮೂರು ಯೋಜನೆ

ವಿದೇಶಿ ಕಲಿಕೆಗೆ ರೈತ ವಿದ್ಯಾನಿಧಿ

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ರೈತರ ಅಭ್ಯುದಯಕ್ಕೆ ವಿವಿಧ ಯೋಜನೆ ರೂಪಿಸುವ ಜತೆಜತೆಗೆ ಇಡೀ ಕೃಷಿ ವಲಯವನ್ನು ಸದೃಢ ಹಾಗೂ ಸ್ವಾವಲಂಬಿಯಾಗಿಸುವ ಉದ್ದೇಶದಿಂದ ಮಹತ್ವದ ಸುಧಾರಣೆಗಳತ್ತ ಸರ್ಕಾರ ಹೆಜ್ಜೆಯನ್ನಿಡಲು ತೀರ್ಮಾನಿಸಿದೆ. ಅಷ್ಟೇ ಅಲ್ಲ, ರೈತರ ಮಕ್ಕಳಿಗಾಗಿ ರೂಪಿಸಿರುವ ವಿದ್ಯಾನಿಧಿ ಯೋಜನೆಯನ್ನು ವಿದೇಶಿ ವ್ಯಾಸಂಗಕ್ಕೂ ವಿಸ್ತರಿಸಲು ಸರ್ಕಾರ ಮುಂದಾಗಿದೆ.

ಪ್ರಸ್ತುತ ರೈತರ ಮಕ್ಕಳಿಗೆ ವಿದೇಶದಲ್ಲಿ ವ್ಯಾಸಂಗ ಮರೀಚಿಕೆಯೇ ಆಗಿದೆ. ಪ್ರತಿಭೆ ಇದ್ದರೂ ವಿದೇಶದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಹಣಕಾಸಿನ ಸಮಸ್ಯೆ ಅಡ್ಡಿಯಾಗಿದೆ. ಇನ್ನು ರೈತರ ಮಕ್ಕಳ ಸಲುವಾಗಿ ರೂಪಿಸಿರುವ ವಿದ್ಯಾನಿಧಿ ಯೋಜನೆ ಕೇವಲ ಕಾಲೇಜು ಶಿಕ್ಷಣ ಹಂತಕ್ಕೆ ಸೀಮಿತವಾಗಿದೆ. ಮಾಸಿಕ 2 ಸಾವಿರ ರೂ. ಮಾತ್ರ ನೀಡಲಾಗುತ್ತದೆ. ಇದರಿಂದ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವಾರ್ಷಿಕ 100 ರೈತ ಮಕ್ಕಳಿಗಾದರೂ ವಿದೇಶದಲ್ಲಿ ಯಾವುದೇ ರೀತಿಯ ಶಿಕ್ಷಣ ಪಡೆಯಲು ಬೇಕಾದ ಸಂಪೂರ್ಣ ವೆಚ್ಚವನ್ನು ಭರಿಸುವ ಬಗ್ಗೆ ಚಿಂತನೆ ನಡೆಸಿದೆ. ಉನ್ನತ ಶಿಕ್ಷಣ, ಸಂಶೋಧನೆ ಹೀಗೆ ಯಾವುದೇ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರೂ ನೆರವು ನೀಡಲಾಗುತ್ತದೆ. ಈ ಯೋಜನೆಗೆ ವಾರ್ಷಿಕ 100 ಕೋಟಿ ರೂ. ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಈ ಯೋಜನೆ ಘೋಷಣೆಯಾಗಲಿದೆ ಎಂದು ತಿಳಿದುಬಂದಿದೆ.

◗ ಪುಟ 5C



ವಿ ವಿಶೇಷ

ಯೋಜನೆಗಳು

1. ವಿದೇಶದಲ್ಲಿ ವ್ಯಾಸಂಗ ಮಾಡುವ ರೈತರ ಮಕ್ಕಳಿಗೆ ರೈತ ವಿದ್ಯಾನಿಧಿ ವಿಸ್ತರಿಸುವುದು
2. ಬಿತ್ತನೆ ಬೀಜದಲ್ಲಿ ಕುಲಾಂತರಿ ಬೀಜಕ್ಕೆ ಕಡಿವಾಣ ಹಾಕಿ ಉತ್ತಮ ಬೀಜ ನೀಡುವುದು
3. ಮಣ್ಣಿನ ಸತ್ವ ಹೆಚ್ಚಿಸುವ ಮೂಲಕ ಸಾವಯವ ಮಣ್ಣು ಮಾಡುವುದು



ನಮ್ಮ ಸರ್ಕಾರ ರೈತರ ಆದಾಯ ವೃದ್ಧಿಗೆ ಗಮನ ಹರಿಸುವುದರೊಂದಿಗೆ ಸಮಗ್ರ-ಸಮೃದ್ಧಿ ಕೃಷಿಗೆ ಉತ್ತೇಜನ ನೀಡಲಿದೆ. ಮಣ್ಣಿನ ಸಂರಕ್ಷಣೆಗೆ ಸಾವಯವ ಕೃಷಿ, ರಾಸಾಯನಿಕ ಮುಕ್ತ ಆಹಾರ ಉತ್ಪಾದನೆಗೆ ಸಿರಿಧಾನ್ಯಗಳಿಗೆ ಪ್ರೋತ್ಸಾಹ, ಬೀಜೋತ್ಪಾದನೆಯಲ್ಲಿ ಸ್ವಾವಲಂಬಿತನ, ಅತಿಯಾದ ನೀರಿನ ಅವಲಂಬನೆ ತಪ್ಪಿಸಿ ಹವಾಮಾನಕ್ಕೆ ಅನುಗುಣವಾದ ಕೃಷಿ ಪದ್ಧತಿ ರೂಢಿಸುವತ್ತ ಗಮನ ಹರಿಸಿದೆ.

| ಎನ್. ಚಲುವರಾಯಸ್ವಾಮಿ ಕೃಷಿ ಸಚಿವ

ವಿದೇಶಿ ಕಲಿಕೆಗೆ ರೈತರ ಮಕ್ಕಳಿಗೆ ವಿದ್ಯಾನಿಧಿ

ಮೊದಲನೇ ಪುಟದಿಂದ...

ಸಾಂಪ್ರದಾಯಿಕ ಬಿತ್ತನೆ ಬೀಜ: ರಾಜ್ಯದಲ್ಲಿ ಈಗ ಬಿತ್ತನೆ ಬೀಜಕ್ಕೆ ಖಾಸಗಿ ಕಂಪನಿಗಳ ಮೇಲೆ ಅವಲಂಬನೆಯೇ ಹೆಚ್ಚಾಗಿದೆ. ಆ ಕಂಪನಿಗಳು ಸರ್ಕಾರದ ಸಬ್ಸಿಡಿಯನ್ನು ನುಂಗುವುದರ ಜತೆಗೆ ರೈತರಿಗೆ ಆಗುವ ನಷ್ಟಕ್ಕೆ ಉತ್ತರದಾಯಿಗಳಾಗಿರುವುದಿಲ್ಲ. ಔಷಧ ಮಾಫಿಯಾದ ರೀತಿಯಲ್ಲಿಯೇ ಬೀಜ ಮಾಫಿಯಾ ಸದ್ದಿಲ್ಲದೇ ಬೇಡು ಬಿಟ್ಟಿದೆ. ರಾಜ್ಯಕ್ಕೆ ಪ್ರತಿವರ್ಷ ಅಂದಾಜು 24 ಲಕ್ಷ ಟನ್ ಬಿತ್ತನೆ ಬೀಜ ಬೇಕು. ಆದರಲ್ಲಿ 3 ಲಕ್ಷ ಬೀಜ ನಿಗಮ ಉತ್ಪಾದನೆ ಮಾಡಿದರೆ, 5 ಲಕ್ಷ ಟನ್ ಸಬ್ಸಿಡಿಯಿಂದ ಬರುತ್ತದೆ. ಉಳಿದ 16 ಲಕ್ಷ ಟನ್ ಖಾಸಗಿ ಕಂಪನಿಗಳ ಮೇಲೆ ಅವಲಂಬಿಸಿರುತ್ತೇವೆ. ಸರ್ಕಾರ ದಿಂದಲೇ ಪ್ರಮಾಣೀಕೃತ ಬೀಜ ಸರಬರಾಜು ಮಾಡದಿರುವುದೇ ಕುಲಾಂತರಿ ಬೀಜಗಳ ಹಾವಳಿಗೆ ಕಾರಣವಾಗಿದೆ. ಬೇರೆ ಬೇರೆ ರಾಜ್ಯ ಗಳಲ್ಲಿ ಆಯಾ ರಾಜ್ಯದ ಸಂಶೋ ಗಳೇ ಬಿತ್ತನೆ ಬೀಜ ಉತ್ಪಾದನೆ ಮಾಡುತ್ತಿ ರುವಾಗ ಕೃಷಿ ವಿವಿಗಳು, ಇಲಾಖೆಗೆ ಸೇರಿದ ಸಾವಿರಾರು ಎಕರೆ ಫಾರಂಗಳಲ್ಲಿ ಖುದ್ದಾಗಿ ಬಿತ್ತನೆ ಬೀಜ ಉತ್ಪಾದನೆ ಏಕೆ ಸಾಧ್ಯವಿಲ್ಲ ವೆಂಬುದಕ್ಕೆ ಉತ್ತರ ಪಡೆಯಲು ಸರ್ಕಾರ ಮುಂದಾಗಿದೆ.

» ಪ್ರತಿವರ್ಷ ಅಂದಾಜು 24 ಲಕ್ಷ ಟನ್ ಬಿತ್ತನೆ ಬೀಜ ಬೇಕು

ಸರ್ಕಾರ ಏನು ಮಾಡಲಿದೆ?: ನಾಗಮಂಗಲ ತಾಲೂಕಿನಲ್ಲಿ 780 ಎಕರೆ, ದಾವಣಗೆರೆ ಜಿಲ್ಲೆಯ ಕತ್ತಲಗೆರೆಯಲ್ಲಿ 300 ಎಕರೆ ಹೀಗೆ ಬಹುತೇಕ ತಾಲೂಕುಗಳಲ್ಲಿ ಇಲಾಖೆಯ ಭೂಮಿ ಪಾಳು ಬಿದ್ದಿದೆ. ವಾರ್ಷಿಕ 2 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡುವ ಮೂಲಕ ವಿಶ್ವವಿದ್ಯಾಲಯಗಳ ಸಂಶೋಧನೆಯನ್ನು ಬಳಸಿಕೊಂಡು 16 ಲಕ್ಷ ಟನ್ ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಿ ರೈತರಿಗೆ ನೀಡುವುದು ಸರ್ಕಾರದ ಉದ್ದೇಶವಾಗಿದೆ.

ಕೃಷಿಮಣ್ಣಿನ ಫಲವತ್ತತೆ ಹೆಚ್ಚಿಸುವುದಕ್ಕೆ ಕ್ರಮ

ಮೊದಲನೇ ಪುಟದಿಂದ...

ಆದ್ದರಿಂದಲೇ ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚಾಗುತ್ತಿಲ್ಲ. ಇದನ್ನು ಮನಗಂಡು ಸರ್ಕಾರ ಸಾವಯವ ಇಂಗಾಲ ವೃದ್ಧಿಸುವ ಕಡೆ ಪ್ರಯತ್ನ ನಡೆಸಲಿದೆ. ರಾಜ್ಯದಲ್ಲಿ ಕೃಷಿ ಆವಲಂಬಿತ ಭೂಮಿಯ ಪ್ರಮಾಣ 80 ಲಕ್ಷ ಹೆಕ್ಟೇರ್‌ನಷ್ಟು ಇದ್ದರೆ, ಅದರಲ್ಲಿ 4ರಿಂದ 5 ಲಕ್ಷ ಹೆಕ್ಟೇರ್ ಸವಳು-ಜವಳು ಆಗಿದೆ.

ಸರ್ಕಾರ ಏನು ಮಾಡಲಿದೆ?: ಭೂಮಿಯ ಫಲವತ್ತತೆ ಹೆಚ್ಚಿಸಲು 8ರಿಂದ 10 ವರ್ಷಗಳು ಬೇಕಾಗುತ್ತದೆ.



ಸಮಗ್ರ ಕೃಷಿಗೆ ಒತ್ತು ನೀಡಿದಾಗ ಆದಾಯದ ಕೊರತೆಯ ಅಂತರವನ್ನು ಸರ್ಕಾರದಿಂದಲೇ ತುಂಬಿ ಕೊಡಬೇಕಾಗುತ್ತದೆ. ಈಗ ರಾಜ್ಯದಲ್ಲಿ ಅಂದಾಜು 80 ಸಾವಿರ ಎಕರೆಯಲ್ಲಿ ಸಿರಿಧಾನ್ಯಗಳ ಉತ್ಪಾದನೆ ಇದೆ. ಎಕರೆಗೆ 10 ಸಾವಿರ ರೂ. ಪ್ರೋತ್ಸಾಹ ಧನವನ್ನು ಸರ್ಕಾರ ನೀಡುತ್ತಿದೆ. ಸಿರಿಧಾನ್ಯ ಬೆಳೆದಾಗ ಅದರ ಹಸಿರೆಲೆ ಉದುರಿ ಹಾಗೂ ರಾಸಾಯನಿಕ ಇಲ್ಲದ ಕಾರಣ ಮಣ್ಣು ಫಲವತ್ತಾಗುತ್ತದೆ. ಆ ರೀತಿಯ ಪ್ರೋತ್ಸಾಹವನ್ನು ವರ್ಷಕ್ಕೆ 50 ಸಾವಿರ ಹೆಕ್ಟೇರ್‌ಗೆ ಹೆಚ್ಚಿಸುವುದು ಸರ್ಕಾರದ ಗುರಿ. ಆ ಮೂಲಕ ಹತ್ತು ವರ್ಷಗಳಲ್ಲಿ ಮಣ್ಣಿನ ಫಲವತ್ತತೆ ವೃದ್ಧಿಸುವ ಬಹುದೊಡ್ಡ ಆಶಯವನ್ನು ಸರ್ಕಾರ ಹೊಂದಿದೆ.

23-12-2023
Vijayavani Pg 01

ಕೃಷಿ ಮಣ್ಣಿನ ಫಲವತ್ತತೆ ಹೆಚ್ಚಳಕ್ಕೆ ಕ್ರಮ

ಮಣ್ಣಿನ ಫಲವತ್ತತೆ ಕಡಿಮೆಯಾಗಿರುವುದು ಗಂಭೀರವಾದ ಸಮಸ್ಯೆಗಳಿಗೆ ಕಾರಣವಾಗಿದೆ. ರಸಗೊಬ್ಬರ, ರಾಸಾಯನಿಕ, ಕೀಟನಾಶಕ, ಸಂಸ್ಕರಿತ ಬಿತ್ತನೆ ಬೀಜಗಳ ಅವಲಂಬನೆಯನ್ನು ತಪ್ಪಿಸಿ ಫಲವತ್ತತೆಯನ್ನು ಹೆಚ್ಚಿಸದಿದ್ದರೆ ಮುಂದಿನ ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಮೇಲೆ ಪರಿಣಾಮ ಬೀರಲಿದೆ. ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಮಣ್ಣು ಎಷ್ಟರ ಮಟ್ಟಿಗೆ ಸತ್ವ ಕಳೆದುಕೊಂಡಿದೆ ಎಂದರೆ ಬರದಂತಹ ಸಂದರ್ಭದಲ್ಲಿ ಒಂದು ಬೆಳೆ ಬೆಳೆಯಬಹುದಾದ ಸಿರಿಧಾನ್ಯಗಳ ಉತ್ಪಾದನೆ ಸಹ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ತಿಪ್ಪೆ ಗೊಬ್ಬರ ಬಳಕೆ ಕಡಿಮೆಯಾಗಿರುವುದು, ಹಸಿರೆಳೆ ಗೊಬ್ಬರ ಬಳಕೆ ಆಗದಿರುವುದು, ಬಹುಬೆಳೆ ಪದ್ಧತಿ ಇಲ್ಲದೇ ಏಕ ಬೆಳೆ ಪದ್ಧತಿ ಹೆಚ್ಚುತ್ತಿರುವುದು ಭೂಮಿಯ ಫಲವತ್ತತೆ ಕುಸಿಯಲು ಕಾರಣವಾಗಿದೆ. ಹೀಗಾಗಿ ಸಮಗ್ರ ಕೃಷಿಗೆ ಒತ್ತು ನೀಡದೆ ಮಣ್ಣನ್ನು ಸಾವಯವ ಮಾಡಲು ಸಾಧ್ಯವೇ ಆಗುವುದಿಲ್ಲ. ಕೃಷಿ ಭೂಮಿಯ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಮಣ್ಣಿನಲ್ಲಿ ನೀರು, ಗಾಳಿ, ಖನಿಜ, ಸಾವಯವ ಪದಾರ್ಥಗಳ ಪ್ರಮಾಣ ದಿನೇದಿನೆ ಇಳಿಮುಖವಾಗುತ್ತಿದೆ.

◗ ಪುಟ 5C

ಮಣ್ಣಿನಲ್ಲಿ ಏನಿರಬೇಕು?

● ಶೇ.25ರಷ್ಟು ನೀರು ● ಶೇ.25 ಗಾಳಿ ● ಶೇ. 45 ಖನಿಜ ● ಶೇ. 5ರಷ್ಟು ಸಾವಯವ ಪದಾರ್ಥ ● ಸಾವಯವ ಪದಾರ್ಥದಲ್ಲಿ ಶೇ. 1ರಷ್ಟು ಸೂಕ್ಷ್ಮ ಜೀವಾಣು

ಸಾವಯವ ಇಂಗಾಲ ಕುಸಿತ

ಒಂದೂವರೆ ದಶಕದ ಹಿಂದೆ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಶೇ.1 ರಿಂದ 1.5 ರಷ್ಟು ಇತ್ತು. ಆದರೆ ಈಗ ಅದು 0.5ಕ್ಕೆ ಇಳಿದಿರುವ ಆತಂಕದ ಸ್ಥಿತಿ ಇದೆ. ಇದೇ ಪರಿಸ್ಥಿತಿ ಮುಂದುವರಿದರೆ ಕೃಷಿ ಉತ್ಪನ್ನಗಳಿಗೆ ಪರಾವಲಂಬಿಯಾಗಬೇಕಾಗುತ್ತದೆ. ಮಣ್ಣಿನ ಫಲವತ್ತತೆ ಕಡಿಮೆ ಇರುವ ಜಿಲ್ಲೆಗಳಲ್ಲಿ ಮಣ್ಣಿನ ಮಾದರಿಗಳನ್ನು ಪರೀಕ್ಷೆ ಮಾಡಿದಾಗ ಶೇ.0.5ಕ್ಕಿಂತ ಕಡಿಮೆ ಸಾವಯವ ಇಂಗಾಲ, ಶೇ.80 ಕ್ಕಿಂತ ಕಡಿಮೆ ಸತುಗಳು, ಶೇ.60 ಕ್ಕಿಂತ ಕಡಿಮೆ ಕಬ್ಬಿಣ ಅಂಶ ಕಂಡು ಬಂದಿದೆ. ರಸಸಾರ, ಲವಣಾಂಶ ಹೆಚ್ಚಾಗಿ ಪೋಷಕಾಂಶ ಕಡಿಮೆಯಾಗಿದೆ.



ಆರ್ಥಿಕವಾಗಿ ಕೈಹಿಡಿದ ಮಿಶ್ರಬೆಳೆ

■ ಮಂಜುನಾಥ ಅಯ್ಯಸ್ವಾಮಿ ಹೊಸಪೇಟೆ

ಕೃಷಿಯಲ್ಲಿ ಯಾರೂ ಉದ್ಧಾರವಾಗಲ್ಲ, ಹಾಕಿದ ಬಂಡವಾಳವೂ ಬರಲ್ಲ ಎನ್ನುವ ರೈತರಿಗೆ ತಾಲೂಕಿನ ಕಡ್ಡಿರಾಂಪುರ ಗ್ರಾಮದ ಎಸ್.ಎಚ್.ಎಂ.ಬಸಯ್ಯಸ್ವಾಮಿ ಉತ್ತರವಾಗಿದ್ದಾರೆ. ಮೂರು ಎಕರೆ ಜಮೀನಿನಲ್ಲಿ 18 ವರ್ಷಗಳಿಂದ ವೈಜ್ಞಾನಿಕವಾಗಿ ಸಾವಯವ ಕೃಷಿ ಮಾಡುತ್ತಿದ್ದಾರೆ. ಮಿಶ್ರಬೆಳೆ ಪದ್ಧತಿ ಆರ್ಥಿಕವಾಗಿ ಕೈಹಿಡಿದಿದ್ದು, ಇದರಿಂದಲೇ ತನ್ನಿಬ್ಬರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದ್ದಾರೆ. ಇವರ ಕೃಷಿ ಕೆಲಸಕ್ಕೆ ಪತ್ನಿ ಸಾಥ್ ನೀಡುತ್ತಿದ್ದಾರೆ.

ಮುಕ್ಕಾಲು ಎಕರೆ ಜಮೀನಿನಲ್ಲಿ ರಾಮಫಲ, ಹನುಮಫಲ, ಲಕ್ಷ್ಮಣಫಲ, ಸೀತಾಫಲ, ಮೆಣಸು, ನುಗ್ಗೆ, ಎಲಬಳ್ಳಿ, 15 ತಳಿಯ ಔಷಧ ಸಸ್ಯಗಳು, ತೇಗ, ಹುಣಸೆ, ಆಲೂಗಡ್ಡೆ ಬಳ್ಳಿ, ಗೋಲ್ಡನ್ ಬಂಬೂ, ಹೂವು ಮತ್ತು ಇತರ ತೋಟಗಾರಿಕೆ ಬೆಳೆ ಜತೆ ಆರಣ್ಯ ಕೃಷಿಯನ್ನೂ ಮಾಡಿದ್ದಾರೆ. ನರ್ಸರಿಯಲ್ಲೂ ಸಸಿಗಳನ್ನು ಮಾಡಿ, ಮಾರಾಟ ಮಾಡುತ್ತಾರೆ. ಉಳಿದ ಜಮೀನಿನಲ್ಲಿ 25ರಿಂದ 40 ಚೀಲ ಭತ್ತ ಬೆಳೆದು ಅಂದಾಜು 25-30 ಕ್ವಿಂಟಾಲ್ ಅಕ್ಕಿ ತೆಗೆಯುತ್ತಾರೆ. ಕ್ವಿಂಟಾಲ್‌ಗೆ ಆರು ಸಾವಿರ ರೂ. ಗಳಂತೆ ಮಾರಾಟ ಮಾಡಿದರೆ 1.50 ಲಕ್ಷ ರೂ. ಆದಾಯ ಬರುತ್ತದೆ. 30 ಸಾವಿರ ರೂ. ಖರ್ಚು ಮಾಡಿ ಕಬ್ಬು ಬೆಳೆಯುವ ಇವರು, 20 ಕ್ವಿಂಟಾಲ್ ಸಾವಯವ ಬೆಲ್ಲ ತಯಾರಿಸಿ 1.50 ಲಕ್ಷ ರೂ.ಗಿಂತ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಉಳಿದ ಅರ್ಧ ಕಬ್ಬನ್ನು ಇತರ ಕೃಷಿಕರಿಗೆ ಮಾರಾಟ ಮಾಡಿ 70-80 ಸಾವಿರ ರೂ. ಆದಾಯ ಗಳಿಸುತ್ತಿದ್ದಾರೆ. ಜೇನು ಸಾಕಣೆಯಲ್ಲೂ ಪರಿಣತಿ ಹೊಂದಿರುವ ಇವರು, ವರ್ಷಕ್ಕೆ ಎರಡು ಲಕ್ಷ ರೂ.ವರೆಗೆ ಜೇನು ಮಾರಾಟದಲ್ಲಿ ಲಾಭ ಕಾಣುತ್ತಿದ್ದಾರೆ. ಇದರ ನಡುವೆ ಗೋಬರ್‌ಗ್ಯಾಸ್, ಎರೆಹುಳು ತೊಟ್ಟಿ ನಿರ್ಮಿಸಿದ್ದಾರೆ. ಹೈನುಗಾರಿಕೆ ಇವರ ಉಪಕಸುಬಾಗಿದೆ.





» ಜೇನುಕೃಷಿ, ಹೈನು, ತೋಟಗಾರಿಕೆ, ಮಾರಾಟಗಾರರೂ ಆಗಿದ್ದಾರೆ ಬಸಯ್ಯಸ್ವಾಮಿ

ಬೆಳೆಗಳಿಗೆ ಕಾಡುವ ಕಾಡುಪ್ರಾಣಿಗಳನ್ನು ಓಡಿಸಲು ಸ್ವತಃ ದೇಸಿ ಬಂದೂಕು ತಯಾರಿಸುವ ಕಲೆಯಲ್ಲೂ ಖ್ಯಾತಿ ಪಡೆದಿದ್ದಾರೆ. ಈವರೆಗೆ ಸಾವಿರಾರು ಬಂದೂಕುಗಳನ್ನು ಮಾರಾಟ ಮಾಡಿದ್ದಾರೆ. ಬಸಯ್ಯಸ್ವಾಮಿಗೆ ರಾಯಚೂರು ವಿವಿ ಸಾವಯವ ಕೃಷಿ ಪ್ರಶಸ್ತಿ, ಬಾಗಲಕೋಟ ವಿವಿ ತೋಟಗಾರಿಕೆ ಪ್ರಶಸ್ತಿ, ಜಿಲ್ಲಾಡಳಿತದಿಂದ ಸಾವಯವ ಕೃಷಿ ಪ್ರಶಸ್ತಿಗಳು ನೇರಿದಂತೆ ಸಂಘ-ಸಂಸ್ಥೆಗಳಿಂದ ಗೌರವ, ಸನ್ಮಾನ ಸಂದಿವೆ.

23-12-2023
Vijayavani Pg 7A

For more information visit
University Library Website
Web - uasbagrilibindia.org
E-mail- librarian@uasbangalore.edu.in



4 ಎಕರೆಯಲ್ಲಿ ಬೆಳೆ ವೈವಿಧ್ಯ

■ ನಾಗರಾಜ್ ಬೂದಿಕೋಟೆ ಕೋಲಾರ

ಸಾವಯವ ಕೃಷಿಯಲ್ಲಿ ಯಶಸ್ಸು ಕಂಡಿರುವ ರೈತ ನಾರಾಯಣಸ್ವಾಮಿ ಹಲವು ಬಗೆಯ ಮಿಶ್ರ ಬೆಳೆಗಳನ್ನು ಬೆಳೆದು ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ. ಬಂಗಾರಪೇಟೆ ತಾಲೂಕಿನ ಚಿಕ್ಕ ಅಂಕಂಡಹಳ್ಳಿ ಗ್ರಾಮದ ರೈತ ನಾರಾಯಣಸ್ವಾಮಿ 10ನೇ ತರಗತಿವರೆಗೆ ಓದಿದ್ದು, ತಮಗಿರುವ ನಾಲ್ಕು ಎಕರೆ ಪ್ರದೇಶದಲ್ಲಿ ಕಾಲಮಾನಕ್ಕೆ ತಕ್ಕಂತೆ ಹೂಕೋಸು, ಆಲೂಗಡ್ಡೆ, ಚೆಂಡು ಹೂವು, ಕ್ಯಾಪ್ಸಿಕಂ ಸೇರಿ ಮಿಶ್ರ ಪದ್ಧತಿ ವ್ಯವಸಾಯ ಮಾಡುತ್ತ ಯಶಸ್ಸು ಕಂಡಿದ್ದಾರೆ.

ತೈವಾನ್ ಸೀಬೆಯಿಂದ ಲಕ್ಷಾಂತರ ಆದಾಯ: ನಾರಾಯಣಸ್ವಾಮಿ ಅವರು ಆಂಧ್ರಪ್ರದೇಶದ ಧರ್ಮಾವರಂನಿಂದ ತೈವಾನ್ ದೇಶದ ಸೀಬೆ ಗಿಡಗಳ 1000 ಸಸಿಗಳನ್ನು ಖರೀದಿಸಿ ತಂದು ಒಂದೂವರೆ ಎಕರೆ ಪ್ರದೇಶದಲ್ಲಿ ನಾಟಿ ಮಾಡಿದ್ದಾರೆ. ಪ್ರತಿ ಸಸಿಗೆ 6 ರೂ.ನಂತೆ ಖರೀದಿ ಮಾಡಿದ ಗಿಡಕ್ಕೆ 10 ಅಡಿಗಳ ಅಂತರದ ಸಾಲು ಮಾಡಿ, ಗಿಡದಿಂದ ಗಿಡಕ್ಕೆ 6 ಅಡಿ ಅಂತರ ಇರುವಂತೆ ನಾಟಿ ಮಾಡಿ ಅದಕ್ಕೆ ಸಾವಯವ ಗೊಬ್ಬರ ಬಳಸಿ ಪೋಷಣೆ ಮಾಡಿದ್ದಾರೆ. ಬಹಳ ಮುಖ್ಯವಾಗಿ ಗಿಡದ ಕಾಂಡದ ಭಾಗಕ್ಕೆ ಬೇವಿನ ಹಿಂಡಿ, ಹೊಂಗೆ ಹಿಂಡಿ, ತಿಪ್ಪೆ ಗೊಬ್ಬರಗಳನ್ನು ಹಾಕುತ್ತಿರುವುದರಿಂದ ಗಿಡ ಬಹಳ ಚೆನ್ನಾಗಿ ಬೆಳೆದು ಉತ್ತಮ ಇಳುವರಿ ನೀಡುತ್ತಿವೆ. ಸೀಬೆ ನಾಟಿ ಮಾಡಲು ಹಣದ ಕೊರತೆ ಎದುರಾದಾಗ ಚಿಕ್ಕ ಅಂಕಂಡಹಳ್ಳಿ ಗ್ರಾಪಂನಿಂದ ನರೇಗಾ ಯೋಜನೆಯನ್ನು ಬಳಸಿಕೊಂಡು ಸುಮಾರು 1.30 ಲಕ್ಷ ರೂ. ಸದ್ಬಳಕೆ ಮಾಡಿಕೊಂಡರು. ತೈವಾನ್ ತಳಿಯ ಸೀಬೆಯು ಆರು ತಿಂಗಳಿಗೆ ಫಸಲು ಬಿಡುವ ಕಾರಣ ಉತ್ತಮ ಆದಾಯ ತಂದುಕೊಡುತ್ತಿದ್ದು, ಹಾಕಿದ ಬಂಡವಾಳದ ಜತೆಗೆ ದುಪ್ಪಟ್ಟು ಆದಾಯ ಗಳಿಸಿದ್ದಾರೆ. ಸೀಬೆಯಿಂದ ತಿಂಗಳಿಗೆ ಒಂದು ಲಕ್ಷ ರೂ.ದಷ್ಟು ಸಂಪಾದನೆ ಮಾಡುತ್ತಿರುವ ಇವರು, ಸೀಬೆ ಬೆಳೆಯ ನಡುವೆ ಅಂತರ ಬೆಳೆಯಾಗಿ ಕ್ಯಾಪ್ಸಿಕಂ, ಮೆಣಸಿನಕಾಯಿ ಬೆಳೆಯುತ್ತಿದ್ದಾರೆ. ಸೀಬೆಗೆ ಬಹು ಬೇಡಿಕೆ ಇದ್ದು ವ್ಯಾಪಾರಿಗಳೇ ನೇರವಾಗಿ ತೋಟಕ್ಕೆ ಬಂದು ಖರೀದಿಸುತ್ತಿದ್ದಾರೆ.





ಶ್ರೀಗಂಧ ಕೃಷಿ

ಒಂದು ಎಕರೆ ಪ್ರದೇಶದಲ್ಲಿ ಶ್ರೀಗಂಧವನ್ನು ಬೆಳೆದು, ಮತ್ತೊಂದು ಎಕರೆಯಲ್ಲಿ ಬಾಳೆ ನಾಟಿ ಮಾಡಿದ್ದಾರೆ. ಅದರೊಳಗೆ ಅಂತರ ಬೆಳೆಯಾಗಿ ಅವರೆ ಬೆಳೆದಿದ್ದಾರೆ. ನಾರಾಯಣಸ್ವಾಮಿಗೆ ಪತ್ನಿ ಸುಮಾ ಕೃಷಿ ಚಟುವಟಿಕೆಯಲ್ಲಿ ಕೈ ಜೋಡಿಸಿದ್ದಾರೆ. ಬೇಸಾಯಕ್ಕಾಗಿ ನಿರ್ಮಿಸಿಕೊಂಡ ಕೃಷಿ ಹೊಂಡದಲ್ಲಿ 3000 ಮೀನಿನ ಮರಿಗಳನ್ನು ಪೋಷಣೆ ಮಾಡುತ್ತಿದ್ದು ಅದರಿಂದಲೂ ಆದಾಯ ಬರುತ್ತಿದೆ.

ಮೇಕೆ ಸಾಕಾಣಿಕೆ: ಕೃಷಿಯ ಜತೆಗೆ ಮೇಕೆ ಸಾಕಣಿ ಮಾಡುತ್ತಿದ್ದು 15 ಉತ್ತಮ ತಳಿಯ ಮೇಕೆಗಳನ್ನು ಸಾಕುತ್ತಿದ್ದಾರೆ. ಶ್ರೀಗಂಧದ ಬೆಳೆಯ ನಡುವೆ ಹಿಪ್ಪುನೇರಳೆ ಬೆಳೆದು ಮೇಕೆಗಳಿಗೆ ಒದಗಿಸುತ್ತಿದ್ದು ಆರು ತಿಂಗಳಿಗೊಮ್ಮೆ ಲಕ್ಷಾಂತರ ರೂ. ಸಂಪಾದನೆ ಮಾಡುತ್ತಿದ್ದಾರೆ.

ರೈತರು ಸ್ವಾವಲಂಬಿಗಳಾಗಲಿ

ಇಂದು ರೈತ ದಿನ ಆಚರಿಸಲಾಗುತ್ತಿದೆ. ಕೃಷಿ ಕ್ಷೇತ್ರ ಸಹ ಹಲವು ಪಲ್ಲಟಗಳನ್ನು, ಸವಾಲುಗಳನ್ನು ಕಂಡು ಸುಧಾರಣೆಯತ್ತ ಮುಖ ಮಾಡುತ್ತಿದೆ. ಇಂಥ ಸಂದರ್ಭದಲ್ಲಿ ಕೃಷಿಯನ್ನು ಉತ್ತೇಜಿಸುವ, ರೈತರನ್ನು ಬೆಂಬಲಿಸುವ ನೀತಿಗಳನ್ನು ಫ್ರಭುತ್ವ ರೂಪಿಸಿ, ಜಾರಿಗೊಳಿಸಿದರೆ ಅಭಿವೃದ್ಧಿಯ ಹೊಸ ಆಯಾಮ ತೆರೆದುಕೊಂಡಂತೆ. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಹಲವು ಮಹತ್ವದ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ. ಮಣ್ಣು, ಬಿತ್ತನೆ ಬೀಜಗಳ ವಿಚಾರದಲ್ಲಿ ರೈತರನ್ನು ಸ್ವಾವಲಂಬಿ ಮಾಡಲು ಮುಂದಾಗಿರುವ ಜತೆಗೆ, ರೈತ ವಿದ್ಯಾನಿಧಿಯನ್ನು ವಿದೇಶದಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ನೀಡಲು ಉದ್ದೇಶಿಸಿದೆ. ವಾರ್ಷಿಕ ನೂರು ರೈತ ಮಕ್ಕಳಿಗಾದರೂ ಇದರ ಲಾಭ ದೊರಕಿಸಿಕೊಡುವ ಆಶಯವನ್ನು ಸರ್ಕಾರ ಹೊಂದಿದೆ.



ಕೃಷಿ ಅಭಿವೃದ್ಧಿಗೆ ಸರ್ಕಾರದ ಹಲವು ಕ್ರಮ

ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಮಣ್ಣು ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಭೂಮಿಯ ಫಲವತ್ತತೆ ಹೆಚ್ಚಿಸಲು ಸಮಗ್ರ ಕೃಷಿಗೆ ಒತ್ತು ನೀಡಲಿದೆ. ಆ ಮೂಲಕ ಸಿರಿಧಾನ್ಯ ಬೆಳೆಗಳನ್ನು ಪ್ರೋತ್ಸಾಹಿಸಲಿದೆ. ಬಿತ್ತನೆ ಬೀಜಕ್ಕಾಗಿ ಖಾಸಗಿ ಕಂಪನಿಗಳ ಮೇಲಿನ ಅವಲಂಬನೆಯನ್ನು ತಗ್ಗಿಸಲು, ಕೃಷಿ ವಿಶ್ವವಿದ್ಯಾಲಯ, ಕೃಷಿ ಇಲಾಖೆಗೆ ಸೇರಿದ ಜಮೀನಿನಲ್ಲಿ ಬಿತ್ತನೆ ಬೀಜ ಉತ್ಪಾದನೆಯ ಮುಂದಾಗಿದೆ. ಅತಿಯಾದ ನೀರಿನ ಅವಲಂಬನೆ ತಪ್ಪಿಸಿ ಹವಾಮಾನಕ್ಕೆ ಅನುಗುಣವಾದ ಕೃಷಿ ಪದ್ಧತಿ ರೂಢಿಸುವತ್ತ ಗಮನ ಹರಿಸಿದೆ. ನಿಜಕ್ಕೂ ಈ ಕ್ರಮಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಶಕ್ತಿ ತುಂಬಿದಂತೆ.

ಸರ್ಕಾರದ ನೀತಿ, ಕಾರ್ಯಕ್ರಮಗಳ ಜತೆಗೆ ರೈತರು ಕೂಡ ಜಾಗ್ರತರಾಗಿ ಒಂದಿಷ್ಟು ಬದಲಾವಣೆಗೆ ಒಡ್ಡಿಕೊಳ್ಳುವುದು, ಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವುದು ಅನಿವಾರ್ಯ. ಮುಖ್ಯವಾಗಿ, ಬೇರೆಯವರು ಯಾವುದಾದರೂ ಒಂದು ಬೆಳೆ ಬೆಳೆದು ಅದಕ್ಕೆ ಉತ್ತಮ ಬೆಲೆ ಸಿಕ್ಕಾಗ ಉಳಿದ ರೈತರು ಅದನ್ನೇ ಬೆಳೆಯಲು ಮುಂದಾಗುತ್ತಾರೆ. ಫಸಲು ಬರುವ ಸಮಯದಲ್ಲಿ ಈ ಬೆಳೆಗೆ ಮಾರುಕಟ್ಟೆ ಸ್ಥಿತಿ ಹೇಗಿರುತ್ತದೆ, ಬೇಡಿಕೆ ಇರುತ್ತದೆಯೋ ಇಲ್ಲವೋ, ಬೆಲೆ ಸಿಗುತ್ತದೆಯೋ ಇಲ್ಲವೋ ಎಂಬುದನ್ನು ಬಹುತೇಕ ರೈತರು ಯೋಚನೆ ಮಾಡುವುದೇ ಇಲ್ಲ. ಆದೇ ರೀತಿ ಯಾರಾದರೂ ಒಬ್ಬ ರೈತ ಕುರಿ-ಮೇಕೆ ಸಾಕಿ ಆರ್ಥಿಕವಾಗಿ ಸದೃಢನಾಗಿದ್ದರೆ ಉಳಿದ ಕೃಷಿಕರೂ ಅದನ್ನೇ ಅನುಕರಿಸಲು ಮುಂದಾಗುತ್ತಾರೆ. ಆದರಲ್ಲಿರುವ ಸಮಸ್ಯೆಗಳೇನು, ಆ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು, ಲಾಭ ತರುವ ಮಾರ್ಗೋಪಾಯಗಳೇನು ಎಂಬುದರ ಬಗ್ಗೆ ಅಧ್ಯಯನ ಮಾಡುವ ಗೋಜಿಗೂ ಹೋಗುವುದಿಲ್ಲ. ಈ ರೀತಿಯ ಅಂಧಾನುಕರಣೆಯೇ ರೈತರು ನಷ್ಟ ಅನುಭವಿಸುವುದಕ್ಕೆ ದಾರಿ ಮಾಡಿಕೊಡುತ್ತದೆ. ಇಂತಹ ಮನೋಭಾವದಿಂದ ಕೃಷಿಕರು ಹೊರಬಂದು, ಮಾರುಕಟ್ಟೆ ಅಧ್ಯಯನ, ಭವಿಷ್ಯದ ಆಂದಾಜು ಮುಂತಾದವುಗಳನ್ನು ರೂಢಿಸಿಕೊಳ್ಳುವುದು ಒಳಿತು. ಇದರಿಂದ ನಷ್ಟ ತಪ್ಪಿ, ಲಾಭದತ್ತ ಮುಖಮಾಡಲು ಸಾಧ್ಯವಾಗುತ್ತದೆ.

23-12-2023
Vijayavani Pg 7A

ಕೃಷಿ ಎಂದರೆ ಮೂಗು ಮುರಿವ ಕಾಲವೊಂದಿತ್ತು. ಆದರೆ, ಕಾಲ ಬದಲಾದಂತೆ ಕೃಷಿ ಸಂಬಂಧಿತ ಸಂಶೋಧನೆಗಳು, ಆಧುನಿಕ ಯಂತ್ರೋಪಕರಣ ಬಳಕೆ, ಬೇಸಾಯದ ಕ್ರಮದಲ್ಲಿನ ಬದಲಾವಣೆ ವಿದ್ಯಾವಂತರೂ ಕೃಷಿ ಕಡೆ ಮನಸ್ಸು ಮಾಡುವಂತೆ ಮಾಡಿವೆ. ಸಾವಯವ ಪದ್ಧತಿ, ಮಿಶ್ರ ಬೇಸಾಯ, ಸಮಗ್ರ ಕೃಷಿ ಮೂಲಕ ವಾರ್ಷಿಕ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುವ ಯಶಸ್ವಿ ರೈತರು ನಮ್ಮಲ್ಲಿದ್ದಾರೆ. 'ರೈತರ ದಿನ'ದ ಈ ಸಂದರ್ಭದಲ್ಲಿ ಮಾದರಿ ಹಾಗೂ ಸಾಧಕ ರೈತರ ವಿಶೇಷ ಲೇಖನಗಳು ಇಂದಿನ ವಿಜಯವಾಣಿಯಲ್ಲಿ...

ಕೃಷಿ ಖುಷಿ

■ ವಿನೋದ್ ಮೂಡಗದ್ದ ಗೋಣಿಕೊಪ್ಪ (ಕೊಡಗು)

ಭತ್ತ ಬೆಳೆಯುವುದರಿಂದ ರೈತರು ದೂರ ಸರಿಯುತ್ತಿರುವ ಸಂದರ್ಭದಲ್ಲಿ ಪೊನ್ನಂಪೇಟೆ ತಾಲೂಕು ಹುದೂರು ಗ್ರಾಮದ ರೈತ ಬಾರಿತ್ತಾಯ ಪಿ.ರವಿಶಂಕರ್ ಭತ್ತದ ಕೃಷಿಯತ್ತಲೇ ಹೆಚ್ಚು ಗಮನ ಕೇಂದ್ರೀಕರಿಸಿದ್ದಾರೆ. 30 ಎಕರೆ ಜಮೀನಿನಲ್ಲಿ 35ಕ್ಕೂ ಹೆಚ್ಚು ಭತ್ತದ ತಳಿಗಳನ್ನು ಸಂರಕ್ಷಿಸಿ ಬೆಳೆಯುತ್ತಿದ್ದಾರೆ. ಬಿ.ಕಾಂ .ಪದವೀಧರರಾಗಿರುವ ರವಿಶಂಕರ್ ಕೆಲವು ವರ್ಷ ಬೇರೆ ಕಡೆ ಕೆಲಸ ಮಾಡಿ ನಂತರ ಸಂಪೂರ್ಣವಾಗಿ ಕೃಷಿಯಲ್ಲಿಯೇ ತೊಡಗಿಸಿಕೊಂಡಿದ್ದಾರೆ. ನೀರಿನ ಕೊರತೆ, ಕಾಡುಪ್ರಾಣಿಗಳ ಹಾವಳಿ, ಕೂಲಿ ಕಾರ್ಮಿಕರ ಸಮಸ್ಯೆ, ಬೆಂಬಲ ಬೆಲೆ ಹೀಗೆ.... ನಾನಾ ಕಾರಣಗಳಿಂದ ಭತ್ತ ಬೆಳೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದನ್ನೇ ಸವಾಲಾಗಿ ಸ್ವೀಕರಿಸಿ ನಿರಂತರವಾಗಿ ಭತ್ತ ಬೆಳೆಯುತ್ತಿದ್ದಾರೆ. ಭತ್ತವನ್ನು ಆಹ್ಯಯಾಗಿ ಮಾರಾಟ ಮಾಡುವುದಕ್ಕಿಂತಲೂ ಬಿತ್ತನೆ ಬೀಜವಾಗಿ ಮಾರಾಟ ಮಾಡಿದರೆ ಲಾಭ ಜಾಸ್ತಿ ಎನ್ನುವುದು ಇವರ ಅಭಿಪ್ರಾಯ. ಕೆಲಸದ ಒತ್ತಡ ಮತ್ತು ಕೂಲಿ ಕಾರ್ಮಿಕರ ಸಮಸ್ಯೆಯಿಂದ ಬಹುತೇಕ ರೈತರು ಯಾಂತ್ರೀಕೃತ ಬೇಸಾಯದತ್ತ ಮುಖ ಮಾಡುತ್ತಿದ್ದರೆ ರವಿಶಂಕರ್ ಮಾತ್ರ ಸಾಂಪ್ರದಾಯಿಕ ರೀತಿಯಲ್ಲಿಯೇ ಮುಂದುವರಿಯುತ್ತಿದ್ದಾರೆ. ರವಿಶಂಕರ್ ಅವರ ಗದ್ದೆಯಲ್ಲಿ ಗಂಧಸಾಲ್, ಸೋನಾಮಸೂರಿ, ಸೋನಾ, ತೂಯಮಲ್ಲಿ, ಕೃಷ್ಣ, ಸೂಪರ್ ಅಮರ್, ಬಿಕೆಆರ್, ಜಯ-ತುಂಗಾ, ಕರಿಗಜಿವಿಲಿ, ಬರ್ಮಾ ಬ್ಲ್ಯಾಕ್, ಕೆಎಸ್‌ಪಿ 10, ಕೆಎಸ್‌ಪಿ 11, ಕೆಎಸ್‌ಪಿ 9, ಎಂಎಸ್‌ಪಿ, ಸಿದ್ದಸಣ್ಣ, ಚಿಂಗ್ರಿ, ತುಂಗಾ, ಆತಿರಾ, ರಾಜಮುಡಿ, ರಾಜಮುಡಿ ರೆಡ್, ರಾಜಮುಡಿ ವೈಟ್, ಕೆಎಂಟಿ, ಕರ್ತ, ಕೆಂಪಕ್ಕಿ ಭತ್ತ, ಮುತ್ಯಾಲ ಹೀಗೆ 35ಕ್ಕೂ ಹೆಚ್ಚು ತಳಿಗಳನ್ನು ಬೆಳೆದು ಉಳಿಸುವ ಕಾಯಕ ಮಾಡುತ್ತಿದ್ದಾರೆ.

» ಯಶಸ್ವಿ ಕೃಷಿಕ ಬಾರಿತ್ತಾಯ ಪಿ.ರವಿಶಂಕರ್





ಭತ್ತದ ಗದ್ದೆಗಳು ಸದ್ಯ ಮಾಯವಾಗುತ್ತಿವೆ. ಭತ್ತದ ಕೃಷಿ ಕ್ಷೀಣಿಸಿದರೆ ಆಂತರ್ಜಲ ಮಟ್ಟವೂ ಕುಸಿಯುತ್ತದೆ. ಹಾಗಾಗಿ ರಾಜ್ಯ ಸರ್ಕಾರ ಕೇರಳ ಮಾದರಿಯಲ್ಲಿ ಭತ್ತ ಬೆಳೆಯುವವರಿಗೆ ಪ್ರೋತ್ಸಾಹ ನೀಡಬೇಕು. ಬಿತ್ತನೆ ಉದ್ದೇಶದಿಂದ ಭತ್ತ ಬೆಳೆಯುತ್ತಿರುವುದರಿಂದ ನಷ್ಟದ ಪ್ರಮಾಣ ಕಡಿಮೆ. ಹೊರ ಜಿಲ್ಲೆಗಳಿಂದಲೂ ಬಿತ್ತನೆ ಬೀಜಕ್ಕಾಗಿ ರೈತರು ಹುಡುಕಿಕೊಂಡು ಬರುತ್ತಿದ್ದಾರೆ.

| ಬಾರಿತ್ತಾಯ ಪಿ. ರವಿಶಂಕರ್ ಪ್ರಗತಿಪರ ರೈತ

ಮಿಶ್ರಬೆಳೆಯೊಂದಿಗೆ ತೋಟಕ್ಕೂ ಸೈ

ಗದ್ದೆಯ ಜತೆಗೆ ತೋಟವನ್ನೂ ನಿರ್ವಹಣೆ ಮಾಡುತ್ತಿದ್ದಾರೆ. ಕಾಫಿ, ಕಾಳುಮೆಣಸು ಮುಖ್ಯ ಬೆಳೆ. ಅಡಕೆಯೂ ಇದೆ. ತೆಂಗಿನಮರ, ಏಲಕ್ಕಿ ಜತೆಗೆ ತೋಟದಲ್ಲಿ ಹಣ್ಣು ಗಿಡಗಳನ್ನೂ ಬೆಳೆದಿದ್ದಾರೆ. ಬೆಣ್ಣೆ ಹಣ್ಣು, ಸೀಬೆ, ರಾಂಬೂಟಾನ್ ಸೇರಿ ದೇಶ-ವಿದೇಶದ ಬೇರೆ ಬೇರೆ ವಿಧದ ಹಣ್ಣಿನ ಗಿಡಗಳನ್ನು ಬೆಳೆಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಾದ ಉಪ್ಪಿನಕಾಯಿಗಾಗಿಯೇ ಬೆಳೆಯುವ ಆಪ್ಪೆ ಮಿಡಿ ಮಾವಿನ ಸುಮಾರು ಇಪ್ಪತ್ತು ತಳಿಗಳನ್ನು ಬೆಳೆದಿದ್ದಾರೆ. ದೇಸಿ ಹಸುಗಳನ್ನು ಸಾಕಿಕೊಂಡಿರುವ ರವಿಶಂಕರ್ ಸಗಣಿ ಗೊಬ್ಬರದ ಜತೆಗೆ ಎರೆಹುಳು ಗೊಬ್ಬರವನ್ನೂ ತಯಾರಿಸಿ ಬಳಸುತ್ತಾರೆ. ಮೀನುಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದು ಗ್ರಾಸ್ ಕಾರ್ಪ್, ಕಾಮನ್ ಕಾರ್ಪ್, ಬಿಗ್ ಹೆಡ್ ಕೋಲ್ಕತ್ತಾ, ಸಿಲ್ವರ್ ಕಾರ್ಪ್, ಕಾಟ್ಲಾ, ರೋಹು ಜಾತಿಯ ಮೀನುಗಳ ಸಾಕಣೆ ಮಾಡುತ್ತಿದ್ದಾರೆ. ಮನೆಯ ಸುತ್ತಮುತ್ತ ಹಣ್ಣು-ತರಕಾರಿಗಳನ್ನು ಬೆಳೆದು ಮನೆ ಬಳಕೆಗೆ ಅಲ್ಲದೆ ಮಾರಾಟವನ್ನೂ ಮಾಡುತ್ತಾರೆ. ಹೂತೋಟದಲ್ಲಿಯೂ ಆಸಕ್ತಿ ಹೊಂದಿದ್ದಾರೆ. ಇವರ ಉದ್ಯಾನದಲ್ಲಿ ಹಲವು ಬಗೆಯ ಹೂವುಗಳು ನಳನಳಿಸುತ್ತಿವೆ.

ಒಂದು ಎಕರೆಯಲ್ಲಿ ಐದು ಲಕ್ಷ ಗಳಿಕೆ

■ ಜಯತೀರ್ಥ ಪಾಟೀಲ ಕಲಬುರಗಿ

ಹತ್ತಾರು ಎಕರೆ ಜಮೀನಿದ್ದರೂ ಅತಿಯಾದ ಮಳೆ, ಬರದಿಂದ ಹಾಳು ಎಂದು ಗೋಳಾಡುವ ಈ ದಿನಗಳಲ್ಲಿ ಒಂದು ಎಕರೆ ಜಮೀನಿನಲ್ಲಿ ವಾರ್ಷಿಕ 5 ಲಕ್ಷ ರೂ.ಗೂ ಅಧಿಕ ಆದಾಯ ಪಡೆಯುತ್ತಿರುವ ರೈತರೊಬ್ಬರು ಹುಬ್ಬೇರಿಸುವಂತೆ ಮಾಡಿದ್ದು, ಇಲ್ಲ ಎನ್ನುವುದಕ್ಕಿಂತ ಇದ್ದುದರಲ್ಲಿ ಹೇಗೆ ಆದಾಯ ಗಳಿಸಬಹುದು ಎಂಬುದಕ್ಕೆ ನಿದರ್ಶನವೂ ಆಗಿದ್ದಾರೆ. ಆಳಂದ ತಾಲೂಕು ಸಂಗೋಳಗಿ(ಸಿ) ಗ್ರಾಮದ ವೆಂಕಟರಾವ್ ಬಿರಾಜದಾರ್ ಎಂಬುವರಿಗೆ ಇರುವುದು ಒಂದೇ ಎಕರೆ ಜಮೀನು. ಇದ್ದುದರಲ್ಲಿ ಸಂತೃಪ್ತಿ ಕಂಡು ಒಂದಕ್ಕೆ ಎರಡು ಹೇಗೆ ಮಾಡ ಬಹುದೆಂದು ಯೋಚಿಸಿ ಕೃಷಿಯಲ್ಲಿ ಮುಂದಡಿ ಇಡುತ್ತಿದ್ದಾರೆ. ಒಂದು ಎಕರೆಯಲ್ಲಿ 20 ಗುಂಟೆ ಆಂಧ್ರದ ಬಾಲನಗರ ತಳಿಯ 125 ಸೀತಾಫಲ ಬೆಳೆದಿದ್ದಾರೆ. ಬದು (ವೆಸ್ಟ್ ಜಾಗ)ವಿನಲ್ಲಿ ಕರಿಬೇವು, ಆಕಳಿಗೆ ಮೇವು, ತೊಂಡಲಕಾಯಿ, ನುಗ್ಗೆ, ತೆಂಗು ಬೆಳೆದಿದ್ದಾರೆ. ಮೂರು ತೆಂಗಿನ ಗಿಡ, ಐದು ಲಿಂಬೆ, ಎರಡು ಪೇರು, ಮೂರು ದಾಳಿಂಬೆ, ಆರು ನುಗ್ಗೆ, ಎರಡು ನೀರಲಹಣ್ಣು, ಏಳು ಚಿಕ್ಕು, 80 ಬಾರಿ ಹಣ್ಣಿನ ಗಿಡ ಹಾಕಿದ್ದಾರೆ. ಇದರ ಮಧ್ಯೆ ಮೆಂತೆ, ಪಾಲಕ್, ಕೊತ್ತಂಬರಿ, ಪುದಿನ, ಬಜ್ಜಿ ಪಲ್ಲೆ, ಚಿಲಕಿ ಪಲ್ಲೆ, ಮೂಲಂಗಿ, ತಪ್ಪಲು ಉಳ್ಳಾಗಡ್ಡಿ ಬೆಳೆದಿದ್ದಾರೆ.

» ಸಣ್ಣ, ಪ್ರಗತಿಪರ ರೈತನ ಯಶೋಗಾಥೆ

» ಸಂಗೋಳಗಿ (ಸಿ) ವೆಂಕಟ್ ಮಾದರಿ ಕೃಷಿ



ಇರುವ ಒಂದು ಎಕರೆ ಜಮೀನು, ವರ್ಷವಿಡೀ ಒದ್ದಾಡಿದರೂ ಏನೂ ಲಾಭ ಸಿಗಲ್ಲ. ಬದುಕುವುದೇ ಕಷ್ಟ. ಹೀಗಾಗಿ ಮಲ್ಟಿಪಲ್ ಕೃಷಿ ಮೂಲಕ ಏನಾದರೂ ಸಾಧನೆ ಮಾಡಬಹುದು ಎಂದು ಯೋಚಿಸಿ, ಕೃಷಿ ವಿಜ್ಞಾನಿಗಳ ಸಲಹೆ ಪಡೆದು ದುಡಿಯುತ್ತಿದ್ದೇನೆ. ಪ್ರತಿವರ್ಷ ಎಲ್ಲ ಖರ್ಚು ಹೋಗಿ 4-5 ಲಕ್ಷ ರೂ. ಆದಾಯ ಬರುತ್ತಿದೆ.
| ವೆಂಕಟರಾವ್ ಬಿರಾಜದಾರ್ ಪ್ರಗತಿಪರ ರೈತ, ಸಂಗೋಳಗಿ(ಸಿ)

ಹಂತ-ಹಂತ ಆದಾಯ

ಹಂತ-ಹಂತವಾಗಿ ಆದಾಯ ಬರುವಂತೆ ಯೋಜನೆ ಮಾಡಿಕೊಂಡಿದ್ದಾರೆ. ನಿತ್ಯದ ಆದಾಯಕ್ಕೆ ತರಕಾರಿ ಮಾರಾಟ, ಕುರಿ ವ್ಯವಹಾರದಿಂದ ತಿಂಗಳ ಆದಾಯ, ಹಣ್ಣು ಹಂಪಲು ಮಾರಾಟ ವಾರ್ಷಿಕ ಆದಾಯ ತಂದುಕೊಡುತ್ತಿವೆ. ಈ ಎಲ್ಲ ಒಟ್ಟಿಗೆ ಲೆಕ್ಕ ಹಾಕಿದರೆ ಸುಮಾರು 5 ಲಕ್ಷ ರೂ.ಗೂ (ಖರ್ಚು ವೆಚ್ಚ ತೆಗೆದು) ಅಧಿಕ ಗಳಿಸುತ್ತಿದ್ದಾರೆ. ಸೆಲ್ಫ್ ಸ್ಟಡೆನೆಲಿಲ್ ಮಾದರಿಯಲ್ಲಿ ಪುಟ್ಟ ವ್ಯವಸಾಯ ಮಾಡುತ್ತಿರುವುದು ವಿಶೇಷ. 2019ರಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯ ಪ್ರಶಸ್ತಿ ನೀಡಿ ಗೌರವಿಸಿದೆ.



ಖರ್ಚು ಕಡಿಮೆ ಆದಾಯ ಅಧಿಕ ದುಡಿಮೆ

■ ಕೆ.ಎಸ್.ಪ್ರಣವಕುಮಾರ್ ಚಿತ್ರದುರ್ಗ

ತೋಟದ ಬಳಿಹಕ್ಕರೆ ಮನೆಗೆ ಇಂಪು, ಕಣ್ಣಿಗೆ ತಂಪು. ಎತ್ತ ನೋಡಿದರೂ ಹಚ್ಚ ಹಸಿರಿನಿಂದ ಕಂಗೊಳಿಸುವ ತರಹೇವಾರಿ ತರಕಾರಿ ಗಿಡಗಳ ರಾಶಿ. ನಾವೂ ಕೆಲಸ ಬಿಟ್ಟು ತೋಟಗಾರಿಕೆಯಲ್ಲಿ ತೊಡಗೋಣ ಎನ್ನುವಂತೆ ಪ್ರಚೋದನೆ ನೀಡುತ್ತದೆ ಈ ತೋಟ!

ಮಳೆಯ ಕೊರತೆ, ಸತತ ಬರ, ಆಂತರ್ಜಲ ಮಟ್ಟ ಕುಸಿತದ ನಡುವೆಯೂ ಮೂರು ಎಕರೆ ಭೂಮಿಯಲ್ಲಿ, ಕಡಿಮೆ ಖರ್ಚು, ಅತಿ ಕಡಿಮೆ ನೀರಾವರಿ ಸೌಲಭ್ಯದೊಂದಿಗೆ ಪ್ರತಿ ವರ್ಷವೂ ಲಾಭವನ್ನೇ ಪಡೆಯುತ್ತಿರುವ ಮಾದರಿ ರೈತ ಮೊಳಕಾಲ್ಮೂರು ತಾಲೂಕು ಬಿ.ಜಿ.ಕೆರೆ ಮುತ್ತಿಗರಹಳ್ಳಿಯ ಬೋರಯ್ಯ ಎಂ.ಮ್ಯಾಸರಹಟ್ಟಿ ಸಾಧನೆಯ ಕತೆ. ಬರದ ಬೆಂಗಾಡಿನ ನಡುವೆಯೂ ಸಾವಯವ ಕೃಷಿ ಪದ್ಧತಿಗೆ ಪ್ರಾಶಸ್ತ್ಯ ನೀಡಿ, ವಿನೂತನ ಪ್ರಯೋಗ ಆಳವಡಿಸಿಕೊಂಡಿದ್ದಾರೆ. ಇದನ್ನೇ ಕಾಯಕವಾಗಿಸಿಕೊಂಡು ಪುಷ್ಟ, ವಿವಿಧ ತರಕಾರಿಗಳನ್ನು ಚಾಣಾಕ್ಷತನದಿಂದ ಬೆಳೆಯುವ ವಿಧಾನ

23-12-2023
Vijayavani Pg 7B



ಬರದ ನೆಲದಲ್ಲಿ ಭರಪೂರ ಫಲ

■ ನಿತ್ಯಾನಂದ ಶಿವಗಂಗೆ ಚಿಕ್ಕಮಗಳೂರು ಅದು ನೀರನ್ನೇ ಕಾಣದ ಬರದ ನೆಲ. ತೆಂಗಿನ ಮರಗಳಿದ್ದರೂ ಫಸಲು ಮಾತ್ರ ಇರಲಿಲ್ಲ. ಹೀಗಾಗಿ ಭೂಮಿ ಬರಡು ಬಿದ್ದಿತ್ತು. ಆದರೆ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂಬಿಎ ಪದವೀಧರ ಕೈತುಂಬ ಸಂಬಳ ಬರುತ್ತಿದ್ದರೂ ಅದಕ್ಕೆ ಗುಡ್‌ಬೈ ಹೇಳಿ ಬರದ ನೆಲದಲ್ಲಿ ಏನನ್ನಾದರೂ ಸಾಧನೆ ಮಾಡಬೇಕೆಂದು ಏಳು ವರ್ಷಗಳ ಹಿಂದೆ ಬಂದ. ಆ ಯುವಕನ ನಿರಂತರ ಶ್ರಮದಿಂದಾಗಿ ಇಂದು ಆ ನೆಲ ಹಚ್ಚಹಸಿರಿನಿಂದ ಕಂಗೊಳಿಸುತ್ತಿದೆ. ವರ್ಷಕ್ಕೆ ಕನಿಷ್ಠವೆಂದರೂ ಒಂದು ಕೋಟಿ ರೂಪಾಯಿ ಆದಾಯ ಗಳಿಸುತ್ತಿದ್ದಾನೆ. ಇದು ಕಡೂರು ತಾಲೂಕು ನೀರಗುಂಡಿಮಠ ಗ್ರಾಮದ ಗದ್ದೆಮನೆ ಯತೀಶ್ ಅವರ ಕೃಷಿ ಯಶೋಗಾಥೆ.

» ಮಿಶ್ರ ಬೇಸಾಯದಿಂದ ಕೋಟಿ ರೂ. ಆದಾಯ

» ಎಂಬಿಎ ಪದವೀಧರನ ಕೃಷಿ ಯಶೋಗಾಥೆ

ಯತೀಶ್ ತನ್ನ ಉದ್ಯೋಗ ತ್ಯಜಿಸಿ ತಂದೆಗೆ ಸೇರಿದ ಜಮೀನಿನಲ್ಲಿ ಕೃಷಿ ಮಾಡಲು ಬಂದಿದ್ದ. ಆದರೆ ಕೃಷಿ ಮಾಡಲು ಅಲ್ಲಿ ನೀರೇ ಸಿಗುತ್ತಿರಲಿಲ್ಲ. ಕೊಳವೆ ಬಾವಿ ಕೊರೆಸಿದರೂ ನಿರೀಕ್ಷೆಯಂತೆ ಜಲ ಬರಲಿಲ್ಲ. ಆಗ ಯೋಗೀಶ್ ಕೃಷಿ ಇಲಾಖೆ ಅಧಿಕಾರಿಗಳ ಸೂಚನೆಯಂತೆ ತನ್ನ 16 ಎಕರೆ ಜಮೀನಿನಲ್ಲಿ ಎರಡು ಕೃಷಿ ಹೊಂಡ ನಿರ್ಮಾಣ ಮಾಡಿಕೊಂಡು ತರಕಾರಿ ಹಾಗೂ ಹೂವು ಬೆಳೆಯುವ ಮೂಲಕ ಕೃಷಿ ಚಟುವಟಿಕೆ ಆರಂಭಿಸಿ ಇದೀಗ ಭರಪೂರ ಆದಾಯ ಗಳಿಸುವ ಜತೆಗೆ ಪ್ರತಿದಿನ ಹತ್ತು ಜನರಿಗೆ ಉದ್ಯೋಗ ನೀಡುತ್ತಿದ್ದಾನೆ.

ಬದುಕು ಬದಲಿಸಿದ ಮಿಶ್ರ ಬೆಳೆ: ಮಿಶ್ರ ಬೆಳೆ ಬೆಳೆಯುವುದರಿಂದ ಲಾಭ ಗಳಿಸಲು ಸಾಧ್ಯವಿದೆ ಎಂದು ಅರಿತ ಯತೀಶ್ ಅಡಕೆ ಸಸಿಗಳ ಮಧ್ಯೆ ತರಕಾರಿ ಬೆಳೆಯಲಾರಂಭಿಸಿದರು. ಇದೀಗ ಅಡಕೆ ಫಸಲೂ ಆರಂಭಗೊಂಡಿದ್ದು, ತೋಟದ ಮಧ್ಯೆ ತರಕಾರಿ ಬೆಳೆಯುವುದರಿಂದಲೂ ಲಾಭ ಗಳಿಸುತ್ತಿದ್ದಾರೆ. ಸೀತಾಫಲ, ಸೀಬೆ, ಜಾಯಿಕಾಯಿ, ಬಟರ್ ಫ್ರೂಟ್, ನಿಂಬೆ, ಬಾಳೆ ಬೆಳೆಯುತ್ತಿದ್ದಾರೆ. ಇದರಿಂದ ಒಂದು ಬೆಳೆಗೆ ದರ ಕಡಿಮೆಯಾದರೂ ಇನ್ನೊಂದು ಬೆಳೆಯಲ್ಲಿ ಆದಾಯ ಕಾಣುತ್ತಿದ್ದಾರೆ.

ಕೈಹಿಡಿದ ದಾಳಿಂಬೆ: ಯಾವುದನ್ನೂ ಬೆಳೆಯಲು ಸಾಧ್ಯವಿಲ್ಲ ಎಂದು ಕೈಬಿಟ್ಟಿದ್ದ ತೆಂಗಿನ ತೋಪಿನಲ್ಲಿ ಯತೀಶ್ ಭರಪೂರವಾಗಿ ದಾಳಿಂಬೆ ಬೆಳೆದಿದ್ದಾರೆ. ಅಡಕೆ ಮರಗಳಿಂದ ಅಂತರ ಕಾಯ್ದುಕೊಂಡು ದಾಳಿಂಬೆ ಸಸಿ ನಾಟಿ ಮಾಡುವ ಮೂಲಕ ತೆಂಗಿನ ಮರದಿಂದ ದಾಳಿಂಬೆಗೆ ರೋಗ ಬಾರದಂತೆ ಕ್ರಮ ಕೈಗೊಂಡಿದ್ದಾರೆ. ಕಳೆದ ಮೂರು ವರ್ಷಗಳಿಂದ ದಾಳಿಂಬೆಯಲ್ಲಿ ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ.

> ಮೊದಲಿನಿಂದಲೂ ನನಗೆ ಕೃಷಿಯಲ್ಲಿ ಆಸಕ್ತಿಯಿತ್ತು. ಹೀಗಾಗಿ ಕೆಲಸ ಬಿಟ್ಟುಬಂದು ಕೃಷಿಯಲ್ಲಿ ತೊಡಗಿದೆ. ಕೃಷಿ ನಂಬಿ ಕೆಟ್ಟವರಿಲ್ಲ ಎಂಬಂತೆ ನನಗೆ ಕೃಷಿ ಕೈಹಿಡಿದಿದೆ. ವಾರ್ಷಿಕ ಸರಾಸರಿ ಒಂದು ಕೋಟಿ ರೂ. ಆದಾಯ ಗಳಿಸುತ್ತೇನೆ. ಜತೆಗೆ ಪ್ರತಿದಿನ 10 ಜನರಿಗೆ ಕೆಲಸ ನೀಡುತ್ತಿದ್ದೇನೆ.
>
> | ಗದ್ದೆಮನೆ ಯತೀಶ್ ಪ್ರಗತಿಪರ ಕೃಷಿಕ



ವಿನೂತನ ನೀರಾವರಿ

ಯತೀಶ್ ಜಮೀನಿನಲ್ಲಿ ನೀರಿನ ಲಭ್ಯತೆ ಅತಿ ಕಡಿಮೆ. ಹೀಗಾಗಿಯೇ 200X90 ಅಡಿಯ ಒಂದು ಕೃಷಿ ಹೊಂಡ ಹಾಗೂ 21 ಮೀಟರ್ ಸುತ್ತಳತೆಯ ಇನ್ನೊಂದು ಕೃಷಿ ಹೊಂಡ ನಿರ್ಮಿಸಿಕೊಂಡಿದ್ದಾರೆ. ಮಳೆಗಾಲದಲ್ಲಿ ಈ ಕೃಷಿ ಹೊಂಡ ತುಂಬಿಸಿಕೊಳ್ಳುವ ಅವರು ಬೇಸಿಗೆಯಲ್ಲಿ ತೋಟದಲ್ಲಿರುವ ಕೊಳವೆ ಬಾವಿಗಳಲ್ಲಿರುವ ಅಲ್ಪಸ್ವಲ್ಪ ನೀರನ್ನು ಇದೇ ಕೃಷಿ ಹೊಂಡಗಳಿಗೆ ತುಂಬಿಸಿಕೊಳ್ಳುತ್ತಿದ್ದಾರೆ.

ಹೀಗೆ ಕೃಷಿ ಹೊಂಡಗಳಿಗೆ ತುಂಬಿಸಿಕೊಂಡ ನೀರನ್ನು ಪಿವಿಸಿ ಪೈಪ್ ಮೂಲಕ ಹನಿ ನೀರಾವರಿಯಲ್ಲಿ ಬೆಳೆಗಳಿಗೆ ಹರಿಸುತ್ತಿದ್ದಾರೆ. ಇಲ್ಲಿ ಪಿವಿಸಿ ಪೈಪ್‌ಗಳನ್ನು ನೆಲದಿಂದ ಎರಡು ಅಡಿ ಆಳಕ್ಕೆ ಹುಗಿಯಲಾಗಿದ್ದು, ಅಲ್ಲಿಂದ ಸಣ್ಣ ಎಚ್‌ಡಿಪಿಇ ಪೈಪ್ ಮೂಲಕ ಗಿಡಗಳಿಗೆ ನೀರಿನ ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ತೋಟದಲ್ಲಿ ಉಳುಮೆ ಮಾಡಿದರೂ ಪೈಪ್‌ಗಳು ಒಡೆಯುತ್ತವೆ ಎನ್ನುವ ಆತಂಕ ಇಲ್ಲದಾಗಿದೆ.

ಮುರಕಲ್ಲು ಜಾಗದಲ್ಲಿ ಮಾರ್ಕ್‌ಸೆರಾ



» ಮಂಗಳೂರು ನಗರ ಮಧ್ಯೆ ಪ್ರಯೋಗಶೀಲ ಕೃಷಿಕ

» ಭತ್ತ, ತರಕಾರಿ, ಹಣ್ಣು, ಹೂವು ಬೆಳೆಗಳ ಬೇಸಾಯ

■ ವಿಜಯವಾಣಿ ವಿಶೇಷ ಮಂಗಳೂರು ಮುರಕಲ್ಲಿನ ಜಾಗದಲ್ಲಿ ಮಣ್ಣು ತಂದು ಹಾಕಿ ನೆಲ ಹದಗೊಳಿಸಿ, ವಾರ್ಷಿಕ ಎಣೇಲು, ಸುಗ್ಗಿ ಹಾಗೂ ಕೊಳಕೆ ಬೆಳೆಗಳಲ್ಲಿ ಭತ್ತ, ಬೆಂಡೆ, ಅಲಸಂಡೆ, ಸೌತೆ, ಪಪ್ಪಾಯ ಮೊದಲಾದ ತರಕಾರಿ, ಹಣ್ಣು, ಮಲ್ಲಿಗೆ, ಜಾಜಿ ಹೂವುಗಳನ್ನು ವಿನೂತನ ರೀತಿಯಲ್ಲಿ ಬೆಳೆಯುತ್ತಿರುವ ಪ್ರಯೋಗಶೀಲ ಕೃಷಿಕ ನಗರದಲ್ಲಿದ್ದಾರೆ.

ಮೂಲತಃ ಮಡಂತ್ಯಾರು ಬಿತ್ತಿಮಾರು ನಿವಾಸಿ ಮಾರ್ಕ್ ಸೆರಾ ಮಂಗಳೂರಿನ ಮೇರಿಹಿಲ್‌ನಲ್ಲಿ ನೆಲೆಸಿದ್ದಾರೆ. ಬಿತ್ತಿಮಾರ್‌ನಲ್ಲೂ ಐದು ಎಕರೆ ಜಾಗದಲ್ಲಿ ಭತ್ತ, ಅಡಕೆ, ತೆಂಗು, ಬಾಳೆ, ಕಾಳುಮೆಣಸು, ಅನಾನಸು ಮೊದಲಾದ ಮಿಶ್ರ ಕೃಷಿ ಮಾಡುತ್ತಿದ್ದಾರೆ.

ಇವರು ಬೆಳೆದ ಅಕ್ಕಿ ಮಾರುವುದಿಲ್ಲ. ಉಪಯೋಗಿಸಿ ಹೆಚ್ಚಾದುದನ್ನು ಕುಟುಂಬಸ್ಥರಿಗೆ ಹಂಚುತ್ತಾರೆ. ಉಳುಮೆಗೆ ಟಿಲ್ಲರ್ ಬಳಸುತ್ತಿದ್ದು, ಅಗತ್ಯ ಇರುವ ಇತರರಿಗೂ ಬಾಡಿಗೆಗೆ ನೀಡುತ್ತಾರೆ. ಭತ್ತದಿಂದ ಅಕ್ಕಿ ಬೇರ್ಪಡಿಸುವ ಯಂತ್ರವೂ ಇವರಲ್ಲಿದೆ. ಪತ್ನಿ, ಪುತ್ರಿ ಕೂಡ ಉಳುಮೆಯಿಂದ ಹಿಡಿದು ಎಲ್ಲ ಕೆಲಸದಲ್ಲಿ ಭಾಗಿಯಾಗುತ್ತಾರೆ.

ಹೈಡ್ರೋಪೋನಿಕ್ಸ್ ಮಾದರಿ: ಹೈಡ್ರೋಪೋನಿಕ್ಸ್ (ಜಲಕೃಷಿ) ಮಾದರಿಯಲ್ಲಿ ಬಸಳೆ, ಕೊತ್ತಂಬರಿ ಸೊಪ್ಪು, ಹರಿವೆ, ಪುದೀನ ಮೊದಲಾದವುಗಳನ್ನು ಬೆಳೆಯುವ ಇವರು ಉಳಿದ ಭೂಮಿಯಲ್ಲಿ ಬೆಂಡೆ, ಅಲಸಂಡೆ, ಸೌತೆ, ಹೀರೇಕಾಯಿ, ಮೆಣಸು, ಶುಂಠಿ ಬೆಳೆಯುತ್ತಾರೆ. ಅಲ್ಲಲ್ಲಿ ಅಡಕೆ, ಗೇರು, ಹಲಸು, ಮಾವು, ನೇರಳೆ ಹಣ್ಣಿನ ಗಿಡಗಳೂ ಇವೆ. ಅಡಕೆ ಹಾಗೂ ಮಲ್ಲಿಗೆ ಹೂವಿನ ಗಿಡಗಳನ್ನು, ಮನೆಯ ದಿನನಿತ್ಯದ ಬಳಕೆಯ ಬಳಿಕ ಮಿಕ್ಕಿದ ತರಕಾರಿಗಳನ್ನು ಮಾರಾಟ ಮಾಡುತ್ತಾರೆ.

ಸಾವಯವ ಕೃಷಿ: ಕೃಷಿಯಲ್ಲಿ ಹಟ್ಟಿ ಗೊಬ್ಬರ ಬಳಸುತ್ತಾರೆ. ತರಕಾರಿ ತ್ಯಾಜ್ಯ, ಅಡಕೆ ಹಾಗೂ ಎಳನೀರು ತ್ಯಾಜ್ಯಗಳನ್ನು ಗುಂಡಿಯಲ್ಲಿ ಹಾಕಿ ಕೊಳೆಸಿ ಸಾವಯವ ಗೊಬ್ಬರ ತಯಾರಿಸಿ ಬಳಸುತ್ತಾರೆ. ಕೀಟಗಳ ಬಾಧೆಗೆ ಶ್ಯಾಂಪು ಹಾಗೂ ಕಹಿಬೇವಿನ ಎಣ್ಣೆಯನ್ನು ನೀರಿನೊಂದಿಗೆ ಬೆರೆಸಿ ಸಿಂಪಡಿಸುತ್ತಾರೆ. ಕೃಷಿ ಮಾಹಿತಿ ಕೇಳಿಕೊಂಡು ಬರುವವರಿಗೂ ಕೃಷಿ ಪಾಠ ಹೇಳುತ್ತಿದ್ದಾರೆ.

> ಮೇರಿಹಿಲ್‌ನಲ್ಲಿರುವ ತನ್ನ ಜಾಗ ದಿನವಿಡೀ ಬಿಸಿಲು ಬೀಳುವ, ನೀರು ಇಲ್ಲದ, ಕಲ್ಲುಬಂಡೆಗಳಿಂದ ಆವೃತವಾದ ಇಳಿಜಾರಿನ ಜಾಗವಾಗಿತ್ತು. ಮಣ್ಣು ತಂದು ಹಾಕಿ ಗದ್ದೆ ಮಾಡಿದ್ದೇನೆ. ನಮಗೆ ಬೇಕಾದ ಅಕ್ಕಿ, ತರಕಾರಿ, ಹಣ್ಣು ನಾವೇ ಬೆಳೆಯುತ್ತೇವೆ. ಅಂತರ್ಜಲ ವೃದ್ಧಿಗೆ ವ್ಯವಸ್ಥೆ ಮಾಡಿರುವುದರಿಂದ ಗುಡ್ಡ ಪ್ರದೇಶವಾದರೂ ಬೇಸಿಗೆಯಲ್ಲೂ ಧಾರಾಳ ನೀರು ಸಿಗುತ್ತಿದೆ.
>
> | ಮಾರ್ಕ್ ಸೆರಾ ಪ್ರಯೋಗಶೀಲ ಕೃಷಿಕ



ಅಂತರ್ಜಲ ವೃದ್ಧಿಗೆ ಇಂಗುಗುಂಡಿ

ಮನೆಯ ಮೇಲೆ ಬೀಳುವ ಮಳೆ ನೀರು ಸಂಗ್ರಹಿಸಿ ತೋಟ, ಗದ್ದೆಗಳಿಗೆ ಹಾಯಿಸಲು ವ್ಯವಸ್ಥೆ ರೂಪಿಸಿಕೊಂಡಿದ್ದಾರೆ. ಮನೆಯ ಪಕ್ಕ ಮಳೆ ನೀರಿನ ಇಂಗುಗುಂಡಿಯನ್ನು ವಿಶೇಷ ರೀತಿಯಲ್ಲಿ ರಚಿಸಲಾಗಿದೆ. ಇದರಿಂದ ಹಿಂದೆ ನೀರಿಗೆ ಕಷ್ಟಪಡುತ್ತಿದ್ದ ಜಾಗದಲ್ಲಿ ಅಂತರ್ಜಲ ವೃದ್ಧಿಸಿದೆ. ಕೃಷಿಯಲ್ಲಿ ಆಸಕ್ತಿ ಮತ್ತು ಇಚ್ಛಾಶಕ್ತಿ ಇದ್ದರೆ ಮರುಭೂಮಿಯಲ್ಲೂ ಕೃಷಿ ಮಾಡಬಹುದು ಎಂಬುದನ್ನು ಮಾರ್ಕ್ ಸೆರಾ ತೋರಿಸಿಕೊಟ್ಟಿದ್ದಾರೆ.

23-12-2023
V-karnataka
Pg 08

ಮತ್ತೆ ಕೆಂಪು ಬಂಗಾರ ಸಂಭ್ರಮ

ಬ್ಯಾಡಗಿ ಮಾರುಕಟ್ಟೆಯಲ್ಲಿ ಸಂಗ್ರಹ ಏರುಮುಖ | ಘಾಟು ಹೆಚ್ಚಿಸಿದ ಗುಜರಾತ್ ಮೆಣಸಿನಕಾಯಿ

■ **ಗಣೇಶ ಅರ್ಕಾಚಾರಿ** ಬ್ಯಾಡಗಿ (ಹಾವೇರಿ)
ganeshbyd143@gmail.com

ದೀಪಾವಳಿ ನಂತರ ಬ್ಯಾಡಗಿ ಮಾರುಕಟ್ಟೆಗೆ ಒಣಮೆಣಸಿನಕಾಯಿ ಆವಕದಲ್ಲಿ ಗಣನೀಯ ಏರಿಕೆ ಕಂಡು ಬರುತ್ತಿದೆ. ಪ್ರಸಕ್ತ ವರ್ಷ 'ಕೆಂಪು ಬಂಗಾರ' ಸೀಸನ್ ಕಳೆಕಟ್ಟುವ ಸಾಧ್ಯತೆ ದಟ್ಟವಾಗಿದೆ. ಏತನ್ಮಧ್ಯೆ, ಗುಜರಾತ್‌ನಿಂದಲೂ ಒಣಮೆಣಸಿನಕಾಯಿ ಮಾರುಕಟ್ಟೆಗೆ ಬಂದಿರುವುದು 'ಘಾಟು' ಹೆಚ್ಚಿಸಿದೆ.

ಕೋವಿಡ್ ಹೊಡೆತಕ್ಕೂ ಜಗ್ಗದೆ ಮೂರು ವರ್ಷಗಳಿಂದ 2 ಸಾವಿರ ಕೋಟಿ ರೂಪಾಯಿಗೂ ಅಧಿಕ ವಹಿವಾಟು ನಡೆಸಿ ಬ್ಯಾಡಗಿ ಮಾರುಕಟ್ಟೆ ದೇಶದ ಗಮನ ಸೆಳೆದಿತ್ತು. ಈ ವರ್ಷವೂ ಉತ್ತಮ ಆವಕದಿಂದ ಸೀಜನ್ ಆರಂಭವಾಗಿದ್ದು ಮುಂದಿನ 3 ತಿಂಗಳಲ್ಲಿ (ಮಾರ್ಚ್ 31ರವರೆಗೆ) ಅಧಿಕ ವಹಿವಾಟು ನಡೆಯುವ ನಿರೀಕ್ಷೆ ಇದೆ.

ನೀರಾವರಿ ವರದಾನ: ಕಳೆದ ವರ್ಷ ರಾಜ್ಯಾದ್ಯಂತ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಮಾರುಕಟ್ಟೆಗೆ ಕುಂದಗೋಳ, ರೋಣ, ಧಾರವಾಡ, ಗದಗ, ಮುಂಡರಗಿ, ಅಣ್ಣಿಗೇರಿ, ನರಗುಂದ, ನವಲಗುಂದ ಪ್ರದೇಶದಲ್ಲಿ ಬೆಳೆಯುತ್ತಿದ್ದ ಅತ್ಯಲ್ಪ ಲೋಕಲ್ ಮೆಣಸಿನಕಾಯಿ (ಮಳೆಯಾಶ್ರಿತ ಬೆಳೆ) ಮಾರುಕಟ್ಟೆಗೆ ಬಂದಿತ್ತು. ಉತ್ತಮ ದರ ಸಹ ಪಡೆದುಕೊಂಡಿತ್ತು. ಈ ವರ್ಷ ಬರ ಹಿನ್ನೆಲೆ ಲೋಕಲ್ ಮೆಣಸಿಕಾಯಿ ಕೊರತೆ ಹೆಚ್ಚಾಗುವ ಸಾಧ್ಯತೆ ಇದೆ. ಆದರೆ, ರಾಜ್ಯದ ನೀರಾವರಿ ಪ್ರದೇಶಗಳಲ್ಲಿ ಮೆಣಸಿನಕಾಯಿ ಇಳುವರಿ ದುಪ್ಪಟ್ಟು ಬಂದಿದೆ. ಆವಕ ಹೆಚ್ಚಾಗುವ ನಿರೀಕ್ಷೆ ಇದೆ. ಬಳ್ಳಾರಿ, ಕನಕಗಿರಿ, ಕೊಪ್ಪಳ, ರಾಯಚೂರು, ಸಿಂಧನೂರ, ಮಾನ್ವಿ, ಕಲಬುರಗಿ, ಹಿರಿಯೂರ, ಶಿರಾ ಪ್ರದೇಶಗಳಲ್ಲಿ ನೀರಾವರಿ ಮೂಲಕ ಮೆಣಸಿನಕಾಯಿ ಬೆಳೆಯಲಾಗುತ್ತದೆ.

ಹೊರ ರಾಜ್ಯದಿಂದ ಹೆಚ್ಚಿನ ಆವಕ: ಆಂಧ್ರಪ್ರದೇಶದ ಶ್ರೀಶೈಲ, ಅನಂತಪುರ, ಕರ್ನೂಲ್, ವಾರಂಗಲ್, ಗುಂಟೂರ, ಗುಜರಾತನ ರಾಜಪೋಟ್, ಗೊಂಡಲ್, ಮಧ್ಯಪ್ರದೇಶ ಸೇರಿ ಹಲವು ಕಡೆಗಳಲ್ಲಿ ಉತ್ತಮ ಇಳುವರಿ ಬಂದಿದ್ದು ಇಲ್ಲಿಂದಲೂ ಬ್ಯಾಡಗಿ ಮಾರುಕಟ್ಟೆಗೆ ಮೆಣಸಿನಕಾಯಿ ಹರಿವು ಹೆಚ್ಚಾಗಿದೆ.



ಬ್ಯಾಡಗಿ ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಆವಕ.

ಯಾವುದಕ್ಕೆ ಎಷ್ಟು ದರ? (ಕ್ವಿಂಟಾಲ್‌ಗೆ)

■ ಡಬ್ಬಿ/ಕಡ್ಡಿ ತಳಿ	3000–65000 ರೂ.
■ ಗುಂಟೂರು ತಳಿ	2000–19000 ರೂ.
■ ಗುಜರಾತ್ ತಳಿ	2000–14000 ರೂ.

> ಉತ್ತಮ ದರ ಹಾಗೂ ಆವಕದಿಂದಾಗಿ ಕಳೆದ 3 ವರ್ಷ ಸರಕಾರ ಗುರಿ ನಿಗದಿ ಮಾಡಿದ ಮಾರುಕಟ್ಟೆ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ಸಂಗ್ರಹ ಮಾಡಲಾಗಿದೆ. ಸರಕಾರ ಈ ವರ್ಷ ಮಾರುಕಟ್ಟೆ ಶುಲ್ಕ ಹೆಚ್ಚಳ ಮಾಡಿದೆ. ಗುರಿ ಮುಟ್ಟಲು ಆವಕದ ಜತೆಗೆ ಉತ್ತಮ ದರದ ಸಾಥ್ ಬೇಕಿದೆ.
>
> **– ಎಚ್.ವೈ.ಸತೀಶ** ಕಾರ್ಯದರ್ಶಿ, ಎಪಿಎಂಸಿ, ಬ್ಯಾಡಗಿ

ಗುಜರಾತ್ ತಳಿ ಸಂಚಲನ

ಗುಜರಾತ್ ಮೆಣಸಿನಕಾಯಿ ಮಾರುಕಟ್ಟೆಗೆ ಲಗ್ಗೆ ಇಟ್ಟು ಸಂಚಲನ ಉಂಟು ಮಾಡಿದೆ. ನೋಡಲು ಥೇಟ್ ಬ್ಯಾಡಗಿ ಮೆಣಸಿನಕಾಯಿಯಂತೆ ಕಂಡು ಬರುವ ಇದರ ಬೆಲೆಯೂ ಕಡಿಮೆ ಇದ್ದು, ಇತರ ಮೆಣಸಿನಕಾಯಿಗೆ ಪೈಪೋಟಿ ನೀಡಲು ಸಜ್ಜಾಗಿದೆ.



ಕಳೆದ ವರ್ಷ ಗುಣಮಟ್ಟದ ಮೆಣಸಿನಕಾಯಿಗೆ ದಾಖಲೆ ದರ ಹಿನ್ನೆಲೆ ರೈತರ ಮೊಗದಲ್ಲಿ ನಗು ಕಾಣಿಸಿತ್ತು. ಈ ವರ್ಷ ಗುಜರಾತ್ ಮೆಣಸಿನಕಾಯಿ ಹಾವಳಿಯಿಂದ ದರದಲ್ಲಿ ಸಾಕಷ್ಟು ವ್ಯತ್ಯಾಸವಾಗುವ ಸಾಧ್ಯತೆಗಳಿದ್ದು, ವ್ಯಾಪಾರಸ್ಥರು ಹಾಗೂ ರೈತರ ನಿದ್ದೆಗೆಡಿಸಿದೆ.

The E

Does the Future of Hapus Lie in Fruit Wine?

One mango farmer in Ratnagiri is experimenting with making part of his crop into a fruit wine, in the hope that this value addition might help farmers like him survive



VIKRAM DOCTOR

Home winemakers across India are opening their bottles for Christmas. Made with the glut of fruit from earlier in the year, by December the wine is ready. Some is sold clandestinely or, in Goa, openly in Christmas bazaars. They offer a sweet, fruity and spicy (ginger or nutmeg) way to mark the season.

But Noshirwan Mistry, who has a large mango orchard in Dapoli in Ratnagiri district, tells me of a less happy reason to make fruit wine. Ratnagiri is ground zero for Alphonsos, the mangoes most prized in Maharashtra and Gujarat. Because of their good travelling properties and early proximity to shipping networks from Mumbai, Alphonsos have also become the Indian mango variety best known abroad.

Every year there are stories of freakishly early February arrivals going for insane prices — as much as ₹10,000 a box this year. As summer progresses prices come down, but rarely below ₹800-1,000 a dozen. Alphonsos, or Hapus, as they are known locally, are possibly the highest priced horticultural product grown on a wide scale in India. They have long underwritten prosperity in the North Konkan.

Mistry's mangoes are among the best. He farms organically, refusing to put the chemicals that other farmers now use routinely. He also leaves mangoes to ripen on the tree much longer, a crucial step in their developing real complexity of taste and aroma. He avoids selling through intermediaries, often delivering the mangoes himself to customers willing to pay a premium for this quality.



ISTOCK PHOTO

WHINE & WINE

With weather patterns getting more erratic, mango flowering and fruiting is also less predictable – which is unnerving when most of your profits are dangling from the tree

Yet, Mistry now tells me he is experimenting with making part of his crop into a fruit wine, in the hope that this value addition might help farmers like him survive. The coastal belt is witnessing a land rush, with developers snapping up land to build resorts or villas for urbanites looking for holiday homes. "I know other farmers in the same village who have already sold out and stopped growing mangoes," he says.

This is happening across India in areas where agricultural produce will never bring returns comparable to non-agricultural development. But why would this happen with Hapus and their princely prices? Mistry says a major reason is lack of labour to tend the orchards. "When resorts come up, they offer higher paying jobs, and we can't compete," he says. Even when labour comes in from other parts of India, they soon get seduced by non-agricultural jobs.

This hits Mistry harder than most farmers, since growing organically and picking late requires more work. But other farmers too are facing problems of finding a new generation willing to take on the hard work and weather-bound risks of horticulture. With weather patterns getting more erratic, mango flowering and fruiting is also less predictable — which is unnerving when most of your profits are dangling from the tree.

Mango farmers mitigate risks by striking deals in advance with mango traders, or even handing over orchards for them to manage. But traders are even less willing to run risks, so push to pick earlier and ripen artificially. This can be done by exposing fruit to ethylene, the gas that plants produce naturally to start the ripening process.

Some fruits, like bananas, produce ethylene in amounts that ripen fruits placed in proximity, but this isn't possible on a really large scale. This is why traders use calcium carbide which reacts with water to produce acetylene, which simulates ethylene. Every summer there is a panic about mangoes ripened with calcium carbide being carcinogenic. The evidence for this is slim, since the real risks with calcium carbide are for the workers handling it, and while this may be a serious issue, it's not what mango consumers are concerned with.

The problem with such artificially ripened mangoes is that they just don't taste as good as tree-ripened mangoes of the kind that Mistry produces. In the past, most Hapus lovers had access to such mangoes, through farmers like Mistry who sold to them directly, or city workers with roots in the Konkan who supplemented their incomes by selling mangoes from their home farms. But as farmers hand over their orchards to traders, or abandon them entirely, this source is disappearing.



FILE PHOTO

Mainstream economists will tell us this shouldn't matter. With a product as valued as Hapus, farmers should be able to price in higher costs for labour and risk management. But Mistry says there is a ceiling on how much he can charge: "I can't really sell for more than ₹2,000 a box." Fruit is always a discretionary expense in India, where our per capita consumption is low. When prices rise people either drop fruit from their diets, or find cheaper fruit — and our markets are now flooded with imported apples and other fruit.

This imported fruit may not be able to compare to a really good Alphonso, but how does that matter when, thanks to artificial ripening, most consumers never get to try one? And the parallel development of artificial flavours further reduces the chances that people will ever try a perfect ripe fruit. Canned or frozen Alphonso pulp has been suggested as one solution to price volatility, but there are rumours that papaya pulp flavoured with mango essence is being passed off as the real thing.

Hence the Alphonso wine that Mistry has turned to. He had tried making it on a small scale in the past, but now is working with a professional operation, that could handle the demands of licensing and distribution. Mistry hopes this may help him keep going, and economists might laud this as entrepreneurship in action. Alphonso lovers will be left to wonder if raising a toast with mango wine will really be a substitute for the fruit they love.

23-12-2023
Eco times
Pg 09



23-12-2023
Hosadiganta
Pg 05